International Journal of Kannada Research 2019; 5(2): 03-04




International Journal of Kannada Research
www.kannadajournal.com

**ISSN: 2454–5813**
IJKR 2019; 5(2): 03-04
© 2019 IJKR
www.kannadajournal.com
Received: 02-02-2019
Accepted: 05-03-2019

**ಶ್ರೀ ಹರೀಶ್ ಶೆಣೈ**
ವಿಜ್ಞಾನಿಗಳು (ಬೇಸಾಯಶಾಸ್ತ್ರ),
ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ,
ದಕ್ಷಿಣ ಕನ್ನಡ ಜಿಲ್ಲೆ, ಕಂಕನಾಡಿ
ಮಂಗಳೂರು 575002.
(ಕರ್ನಾಟಕ ಪಶುವೈದ್ಯಕೀ0ು, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲ0ು, ಬೀದರ್)

**Correspondence**
**ಶ್ರೀ ಹರೀಶ್ ಶೆಣೈ**
ವಿಜ್ಞಾನಿಗಳು (ಬೇಸಾಯಶಾಸ್ತ್ರ),
ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ,
ದಕ್ಷಿಣ ಕನ್ನಡ ಜಿಲ್ಲೆ, ಕಂಕನಾಡಿ
ಮಂಗಳೂರು 575002.
(ಕರ್ನಾಟಕ ಪಶುವೈದ್ಯಕೀ0ು, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲ0ು, ಬೀದರ್)

# ಯಾಂತ್ರಿಕರಣದಿಂದ ಭತ್ತದ ಇಳವರಿ ಮೇಲಾದ ಪರಿಣಾಮ ಮತ್ತು ಲಾಭಗಳು– ಒಂದು ಅಧ್ಯಾ0ುನ

**ಶ್ರೀ ಹರೀಶ್ ಶೆಣೈ**

**ಪ್ರಬಂಧ**
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತ ಪ್ರಮುಖ ಆಹಾರ ಬೆಳೆಯಾಗಿದ್ದು ಸುಮಾರು 55,366 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಇತೀಚಿನ ದಿನಗಳಲ್ಲಿ ಕೂಲಿ ಆಳುಗಳ ಸಮಸ್ಯೆಯಿಂದ ಭತ್ತದ ಕೃಷಿ ಕ್ಷೇತ್ರ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು, ಒಂದು ಅತಂಕಕಾರಿ ಸಂಗತಿಯಾಗಿದೆ. ಸ್ಥಳೀಯ ಆಹಾರ ಸುರಕ್ಷತೆಯ ದೃಷ್ಟಿಯಿಂದ ಬದಲಾದ ಸನ್ನಿವೇಶಕ್ಕೆ, ಭತ್ತದ ಕೃಷಿಯಲ್ಲಿ ಯಾಂತ್ರೀಕತೆ0ು ತಂತ್ರಜ್ಞಾನ ಅಳವಡಿಸಿ ಭತ್ತದ ಕೃಷಿಯನ್ನು ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರವು 4 ವರ್ಷದ ಅವಧಿಯಲ್ಲಿ (2011–12 ರಿಂದ 2014–15) ಜಿಲ್ಲೆಯ 24 ಗ್ರಾಮಗಳಲ್ಲಿ ರೈತರ ಸಹಭಾಗೀತ್ವದಲ್ಲಿ 21.0 ಹೆಕ್ಟೇರ್ ಪ್ರದೇಶದಲ್ಲಿ ಯಾಂತ್ರೀಕೃತ ಭತ್ತದ ಕೃಷಿಯ 44 ಮುಂಚೂಣಿ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿತು. ಚಾಪೆನೇಜಿ ಸಸಿ ಮಡಿ ವಿಧಾನ, ಯಾಂತ್ರೀಕೃತ ಭತ್ತದ ನಾಟಿ ಮತ್ತು ಕೋನೋವೀಡರ ಭಳಕೆಯ ಕುರಿತು ರೈತರಿಗೆ 06 ತರಬೇತಿಗಳು ಹಾಗೂ 24 ಪದ್ದತಿ ಪ್ರಾತ್ಯಕ್ಷಿಕೆ ಮುಖಾಂತರ ತಂತ್ರಜ್ಞಾನವನ್ನು ರೈತರಿಗೆ ವರ್ಗಾಯಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 1196 ರೈತರು ಭಾಗವಹಿಸಿ ತಂತ್ರಜ್ಞಾನದ ಪ್ರಯೋಜನವನ್ನು ಪಡೆದುಕೊಂಡರು. ಮುಂಚೂಣಿ ಪ್ರಾತ್ಯಕ್ಷಿಕೆಯ ಪರಿಣಾಮವಾಗಿ ಭತ್ತದಲ್ಲಿ ಶೇಕಡ 19.6 ರಷ್ಟು ಇಳುವರಿ ಹೆಚ್ಚಿಗೆ ಪಡೆಯಲಾಯಿತು ಹಾಗೂ ಪ್ರತಿ ಹೆಕ್ಟೇರ್‌ಗೆ ಸರಾಸರಿ ಕೂಲಿ ವೆಚ್ಚ ರೂ.6362/– ಉಳಿತಾಯದೊಂದಿಗೆ ಲಾಭ ಸರಾಸರಿ ರೂ.16694/– ಪಡೆಯಲಾಯಿತು

**ಪೀಠಿಕೆ**
ಭತ್ತ ಕರಾವಳಿ ಪ್ರದೇಶದ ಪ್ರಮುಖ ಆಹಾರ ಬೆಳೆಯಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸುಮಾರು 55366 ಹೆಕ್ಟೇರ್ ಪ್ರದೇಶದಲ್ಲಿ(2013–14) ಬೆಳೆಯಲಾಗುತ್ತಿದೆ. ಭತ್ತವನ್ನು ಬೆಟ್ಟು(ಣಾಡಿಟಚಿಟಿಜ), ಮಜಲು (ಟುಜಚಿಟಿಜ), ಬಯಲು (ಟಠತಿಚಿಟಿಜ) ಮುಂತಾದ ಸನ್ನಿವೇಶದಲ್ಲು ಹಾಗೂ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಬೆಳೆದುಕೊಂಡು ಬರಲಾಗುತ್ತಿದೆ. ಜಿಲ್ಲೆ0ುಲ್ಲಿ ಭತ್ತದಲ್ಲಿ ಅಧಿಕ ಇಳುವರಿ ಪಡೆಯಲು ಉತ್ತಮ ಹವಾಮಾನ; ವಾರ್ಷಿಕ ಮಳೆ, ಮಣ್ಣು ಮುಂತಾದ ಅನುಕೂಲಕರವಾದ ವಾತಾವರಣವಿದ್ದರೂ ಸಹ ಕೂಲಿ ಕಾರ್ಮಿಕರ ಸಮಸ್ಯೆ, ಹೆಚ್ಚಿನ ಕೂಲಿ, ಏರುತ್ತಿರುವ ಕೃಷಿ ಪರಿಕರಗಳ ಬೆಲ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ ಮುಂತಾದ ಕಾರಣಗಳಿಂದ ವರ್ಷದಿಂದ ವರ್ಷಕ್ಕೆ ಭತ್ತದ ಕೃಷಿ ಕ್ಷೇತ್ರ ಕಡಿಮೆಯಾಗುತ್ತಿರುವುದು ಒಂದು ಅತಂಕಕಾರಿ ಸಂಗತಿಯಾಗಿದೆ. ಇದರಿಂದ ಭತ್ತ ದ ಕೃಷಿಯ ಕ್ಷೇತ್ರ 1999–2000 ದಲ್ಲಿ 66438 ಹೆಕ್ಟೇರ್ ಪ್ರದೇಶ 2011–12 ರಲ್ಲಿ 55366 ಹೆಕ್ಟೇರ್ ಪ್ರದೇಶಕ್ಕೆ ಇಳಿದು ಶೇಕಡ 17ರಷ್ಟು ಕಡಿಮೆ0ುಾಗಿರುತ್ತದೆ. ಆದರೆ ಸ್ಥಳೀಯ ಆಹಾರ ಸುರಕ್ಷತೆಯ ದೃಷ್ಟಿಯಿಂದ ಭತ್ತದ ಕೃಷಿಯನ್ನು ಮುಂದುವರಿಸಿಕೊಂಡು ಹೋಗುವುದು ಅನಿವಾರ್ಯ ಮಾತ್ರವಲ್ಲದೆ ಅವಶ್ಯಕತೆಯು ಹೌದು. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಅಭಿವೃದ್ಧಿಯಾದ ನೂತನ ತಾಂತ್ರಿಕತೆಯನ್ನು ಬಳಸಿ ಸೂಕ್ತ ಬೇಸಾಯ ಕ್ರಮಗಳನ್ನು ಭತ್ತದ ಕೃಷಿಯಲ್ಲಿ ಅಳವಡಿಸುವುದರಿಂದ ಅಧಿಕ ಇಳುವರಿ ಪಡೆಯುವುದು ಮಾತ್ರವಲ್ಲದೆ ಭತ್ತದ ಕೃಷಿಯನ್ನು ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ

(ವಿಧಾನ ಸಿಂಗ್ ಮತ್ತು ಇತರರು, 2012) ಭತ್ತದ ಕೃಷಿಯಲ್ಲಿ ಯಂತ್ರಗಳನ್ನು ಬಳಕೆ ಮಾಡಿ ಕೂಲಿ ಖರ್ಚನ್ನು ಉಳಿತಾಯ ಮಾಡುವುದಲ್ಲದೆ, ಸಮಯಕ್ಕೆ ಸರಿಯಾಗಿ ಕೃಷಿ ಕಾರ್ಯಗಳನ್ನು ಕೈಗೊಂಡು ಹೆಚ್ಚಿನ ಇಳುವರಿ ಪಡೆದು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರವು ಭತ್ತದ ಕೃಷಿಯಲ್ಲಿ ಸೂಕ್ತ ಯಂತ್ರೋಪಕರಣಗಳನ್ನು ಬಳಕೆಯ ಕುರಿತು ಜಿಲ್ಲೆಯಲ್ಲಿ ಮೂಂಚೂಣಿ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿ ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ ಸುಧಾರಿತ ಕೃಷಿ ಪದ್ಧತಿಗಳನ್ನು ರೈತರ ಜಮೀನಿನಲ್ಲಿ ವಿಜ್ಞಾನಿಗಳ ಮೇಲ್ವಿಚಾರಣೆ0ುಲ್ಲಿ ಆಚರಣೆಗೆ ತಂದು ಪ್ರತ್ಯಕ್ಷವಾಗಿ ಅವುಗಳ ಲಾಭ ಪ್ರ0ುೋಜನಗಳನ್ನು ರೈತರಿಗೆ ಮನನ ಮಾಡಿಕೊಡುವ ವಿಧಾನವನ್ನು ಮುಂಚೂಣಿ ಪ್ರಾತ್ಯಕ್ಷಿಕೆ ಎಂದು ಕರೆ0ುಲಾ ಗುತ್ತದೆ.. ಈ ಪದ್ಧತಿ0ು ಮುಖಾಂತರ ಹೊಸ ಹೊಸ ಕೃಷಿ ಪದ್ಧತಿಗಳು ಎಷ್ಟರಮಟ್ಟಿಗೆ ಅನ್ವ0ುವಾಗುತ್ತವೆ ಎಂಬುದನ್ನು ತೋರಿಸಿಕೊಡಲಾಗುತ್ತದೆ. ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 0ುಶಸ್ವಿ0ುಾಗಿ ನಿರ್ವಹಿಸಿದಾಗ ರೈತರಿಗೂ ವಿಸ್ತರಣ ಕಾ0ುರ್ಕರ್ತರಿಗೂ ಬಲವಾದ ನಂಬಿಕೆ, ವಿಶ್ವಾಸಮೂಡುತ್ತದೆ..

**ವಸ್ತು ಮತ್ತು ಅನುಷ್ಠಾನದ ವಿಧಾನಗಳು:**

ಕೃಷಿ ವಿಜ್ಞಾನ ಕೇಂದ್ರವು ರೈತರ ಸಹಭಾಗೀತ್ವದಲ್ಲಿ ಜಿಲ್ಲೆ0ು ಆ0ುದ್ದ ಗುಚ್ಚಗ್ರಾಮದಲ್ಲಿ ಭತ್ತದ ಕೃಷಿಯಲ್ಲಿ ಯಂತ್ರೋಪಕರಣಗಳ ಭಳಕೆಯ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿತು. ಸೀಮಿತ ಯಂತ್ರೋಪಕರಣಗಳ ಭಳಕೆಯ ಅಂಗವಾಗಿ ನಾಟಿ ಯಂತ್ರ ಭಳಕೆ ಹಾಗೂ ಕಳೆ ನಿಯಂತ್ರಣಕ್ಕಾಗಿ ಕೋನೊವೀಡರ್ ಯಂತ್ರ ಭಳಕೆ ಕುರಿತು ತಂತ್ರಜ್ಞಾನವನ್ನು ವರ್ಗಾವಣೆ ಮಾಡಿತು. ನಾಲ್ಕು ವರ್ಷದ ಅವಧಿಯಲ್ಲಿ (2011–12 ರಿಂದ 2014–15). ಕೃಷಿ ವಿಜ್ಞಾನ ಕೇಂದ್ರವು ದಕ್ಷಿಣ ಕನ್ನಡ ಜಿಲ್ಲೆಯ 24 ಗ್ರಾಮಗಳಲ್ಲಿ ಒಟ್ಟು 44 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 21 ಹೆಕ್ಟೇರ ಪ್ರದೇಶದಲ್ಲಿ ರೈತರ ಸಹಭಾಗೀತ್ವದಲ್ಲಿ ಏರ್ಪಡಿಸಿತು. ತಂತ್ರಜ್ಞಾನ ವರ್ಗಾವಣೆಯ ಅಂಗವಾಗಿ ಗುಚ್ಚ ಗ್ರಾಮಗಳ ರೈತರಿಗೆ 6 ತರಬೇತಿಗಳನ್ನು ಏರ್ಪಡಿಸಲಾಗಿತ್ತು. ಚಾಪೆ ನೇಜಿ ವಿಧಾನ ಹಾಗೂ ಯಾಂತ್ರೀಕೃತ ಭತ್ತದ ನಾಟಿಯ ಕುರಿತು 25 ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ರೈತರ ಕೃಷಿ ಕ್ಷೇತ್ರದಲ್ಲಿ ನಡೆಸಲಾಯಿತು. ಕಾಲ ಕಾಲಕ್ಕೆ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಕ್ಷೇತ್ರ ಬೇಟಿ ನೀಡಿ ರೈತರಿಗೆ ಸೂಕ್ತ ಸಲಹೆ ಸೂಚನೆ ನೀಡಿದರು. ಅಂತಿಮವಾಗಿ ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಕ್ರಮದಡಿಯಲ್ಲಿ ಬೆಳೆಸಿದ ಭತ್ತದ ಬೆಳೆಯ ಕಟಾವನ್ನು ಯಂತ್ರದ ಮೂಲಕ ನಡೆಸಿ ಕ್ಷೇತ್ರೋತ್ಸವ ಕಾರ್ಯಕ್ರಮದೊಂದಿಗೆ ಸಮಾಪನಗೊಂಡಿತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಜಿಲ್ಲೆಯ ಒಟ್ಟು 1196 ರೈತಭಾಂದವರು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

**ಪರಿಣಾಮ ಮತ್ತು ಚರ್ಚೆ**

ಭತ್ತದ ಕೃಷಿಯಲ್ಲಿ ಸೀಮಿತವಾಗಿ ಯಂತ್ರೋಪಕರಣಗಳನ್ನು ಬಳಸುವುದರಿಂದ ಪ್ರಮುಖ ಕೃಷಿ ಕಾರ್ಯಗಳಾದ ಸಸಿ ನಾಟಿ ಮತ್ತು ಕಳೆ ನಿಯಂತ್ರಣವನ್ನು ಸಮರ್ಪಕವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಮಾಡಲು ಸಾಧ್ಯ ಎಂದು ಮುಂಚೂಣಿ ಪ್ರಾತ್ಯಕ್ಷಿಕೆಯಿಂದ ರೈತರಿಗೆ ಸಾಬೀತಾಯಿತು. ನಾಲ್ಕು ವರ್ಷದ ಅವಧಿಯಲ್ಲಿ ಮುಂಚೂಣಿ ಪಾತ್ಯಕ್ಷಿಕೆಯ ತಾಕಿನಲ್ಲಿ ಭತ್ತದ ಸರಾಸರಿ ಇಳುವರಿ ಸರಾಸರಿ 40.67 ಕ್ವಿಂಟಾಲ್ ಪ್ರತಿ ಹೆಕ್ಟೇರೆಗೆ ದಾಖಲಾಯಿತು. ಇದು ಸಂಪ್ರಾದಾಯಿಕ ಪದ್ಧತಿಯಲ್ಲಿ ಬೆಳೆಸಿದ ಭತ್ತದ ಇಳುವರಿ (34.0 ಕ್ವಿಂಟಾಲ್ ಪ್ರತಿ ಹೆಕ್ಟೇರೆಗೆ) ಹೋಲಿಸಿದಾಗ ಶೇಕಡ 19.6ರ ರಷ್ಟು ಹೆಚ್ಚಿಗೆ ದಾಖಲು ಆಯಿತು. ಹೆಚ್ಚಿನ ಇಳುವರಿಯು ಸರಿಯಾದ ಸಮಯಲ್ಲಿ ನಾಟಿ, ಸಸಿಯ ಸರಿಯಾದ ವಯಸ್ಸಿನಲ್ಲಿ ನಾಟಿ ಹಾಗೂ ಸಾಲು ನಾಟಿಯಿಂದ ಕೋನೊವೀಡರ್ ಯಂತ್ರ ಭಳಕೆಯ ಮುಖಾಂತರ ಕಳೆಗಳ ಸಮರ್ಪಕ ನಿಯಂತ್ರಣ ಮುಂತಾದ ಕಾರಣಗಳಿಂದ ಕಂಡುಬಂತು. ಇದೇ ರೀತಿಯ ಪರಿಣಾಮವನ್ನು ಶ್ರೀ ಸಜೀನ ಹಾಗೂ ಇತರರು(2010) 0ುಂತ್ರಿಕೃತ ಭತ್ತದ ಕೃಷಿ0ುಲ್ಲಿ ದಾಖಲಿಸಿರುತ್ತಾರೆ. ಭತ್ತದ ಕೃಷಿ0ುಲ್ಲಿ 0ುಂತ್ರಗಳ ಭಳಕೆಯಿಂದ ಪ್ರತಿ ಹೆಕ್ಟೇರ್‌ಗೆ ಸರಾಸರಿ ಕೂಲಿ ವೆಚ್ಚ ರೂ.6362/– ಉಳಿತಾಯ ಹಾಗೂ ರೂ.16694/– ಲಾಭ ಪಡೆಯಲಾಯಿತು. ಸಮಯದ ಉಳಿತಾಯ ಜೊತೆಗೆ ಸಮಯಕ್ಕೆ ಸರಿಯಾಗಿ ಕೃಷಿ ಕಾರ್ಯಕ್ಕೆ ಯಂತ್ರಗಳ ಲಭ್ಯತೆಯಿಂದ ರೈತರಲ್ಲಿ ಆತ್ಮವಿಶ್ವಾಸ ಮೂಡಿಸಿತು.

**ಸಾರಂಶ ಮತ್ತು ನಿರ್ಣಯ**

ಯಂತ್ರಗಳ ಭಳಕೆಯಿಂದ ಸಮಯಕ್ಕೆ ಸರಿಯಾಗಿ ನಾಟಿ ಕಾರ್ಯ, ಕೂಲಿ ಕಾರ್ಮಿಕರ ಕೊರೆತೆ ನಿವಾರಣೆ, ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಹೆಚ್ಚಳ ಹಾಗೂ ಕ್ಲಪ್ತ ಸಮಯದಲ್ಲಿ ಕೃಷಿ ಚಟುವಟಿಕೆಗಳ ಅನುಷ್ಠಾನ ಭತ್ತದ ಕೃಷಿಯಲ್ಲಿ ಸಾಧ್ಯ ಎಂದು ಮುಂಚೂಣಿ ಪ್ರಾತ್ಯಕ್ಷಿಕೆಗಳಿಂದ ರೈತರಿಗೆ ಸಾಬೀತಾಯಿತು. ಭತ್ತದ ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸುವುದರಿಂದ ಉತ್ಪಾದನಾ ವೆಚ್ಚ ಶೇಕಡ 20–22 ರಷ್ಟು ಕಡಿಮೆಯಾಯಿತು ಹಾಗೂ ಕೂಲಿಯಾಳುಗಳ ಅವಶ್ಯಕತೆ ಶೇಕಡ 30 ರಷ್ಟು ಕಡಿಮೆಯಾಯಿತು. ಜಿಲ್ಲೆಯಲ್ಲಿ ಯಾಂತ್ರೀಕೃತ ಭತ್ತದ ಕೃಷಿಯ ವಿಸ್ತಿರಣವು 2011–12 ರಲ್ಲಿ 65.32 ಹೆಕ್ಟೇರ್ ಪ್ರದೇಶವಿದ್ದುದು 2013–14 ರಲ್ಲಿ 123 ಹೆಕ್ಟೇರ್ ಪ್ರದೇಶಕ್ಕೆ ಏರಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರ ಜೊತೆಗೆ ಗುಡ್ಡಗಾಡು ಪ್ರದೇಶ ಹೊಂದಿರುವುದರಿಂದ ರೈತ ಸ್ನೇಹಿ ಸಣ್ಣ ಹಿಡುವಳಿಗೆ ಹೊಂದುವಂತಹ ಯಂತ್ರಗಳನ್ನು ಅಭಿವೃದ್ಧಿಪಡಿಸಿದಲ್ಲಿ ಜಿಲ್ಲೆಯಲ್ಲಿ ಭತ್ತದ ಕೃಷಿಯ ಯಾಂತ್ರೀಕರಣ ಯಶಸ್ಸು ಸಾಧಿಸಬಹುದಾಗಿದೆ ಹಾಗೂ ಲಾಭದಾಯಕವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ.

**ಉಲೇಖ:**


1. ಎಸ್. ಸಜೀನ, ಹಬೀಬರೆಹಮಾನ್, ಜೆ. ದೀಪಾ, ಬೀನಾ ಪತ್ರೋಸ 2010 ಮಲ್ಲಪುರಮ್ ಜಿಲ್ಲೆಯಲ್ಲಿ ಮಹಿಳಾ ಸಬಳೀಕರಣ ಮುಖಾಂತರ ಕೃಷಿ ಯಾಂತ್ರೀಕರಣ: ಒಂದು ವರದಿ ಪ್ರಕಾಶಕರು ಕೆ.ವಿ.ಕೆ ಮಲ್ಲಾಪುರಮ್ ಕೇರಳ
2. ಟಿ. ವಿಧಾನ ಸಿಂಗ,ಅರ್ ಮಹೇಂದ್ರ ಕುಮಾರ್ ಮತ್ತು ಬಿ ಸಿ. ವಿರಕ್ತಮಠ್ 2012. ಭತ್ತದ ಸೀಮಿತ ಯಾಂತ್ರೀಕರಣದಿಂದ ಲಾಭದಾಯಕ ಕೃಷಿ. ತಾಂತ್ರಿಕ ಮಾಹಿತಿ ಪ್ರಕಟಣೆ: ಭತ್ತ ಸಂಶೋಧನಾ ನಿರ್ದೇಶನಾಲಯ, ಹೈದ್ರಾಬಾದ್, ಆಂಧ್ರಪ್ರದೇಶ.